ಎಲ್.ಎ.ಸಿ ನಂ: 597/2018
ಪಿ.ಡಬ್ಲೂ ನಂ: 01

ಇಂದು ದಿನಾಂಕ: 20.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ: ಅರ್ಜಿದಾರರ ಪರ ಶ್ರೀ ಎಸ್ ಹೆಚ್ ಎಸ್ ವಕೀಲರಿಂದ:**

ನಾನು ಈ ಪ್ರಕರಣದಲ್ಲಿ ಅರ್ಜಿದಾರನಿದ್ದು ನನ್ನ ಮುಖ್ಯ ವಿಚಾರಣೆಯಾಗಿ ಪ್ರಮಾಣಪತ್ರ ಸಲ್ಲಿಸಿದ್ದೇನೆ, ಅದರಲ್ಲಿರುವ ಸಹಿಗಳು ನನ್ನದಾಗಿರುತ್ತದೆ. ಪ್ರಮಾಣಪತ್ರದಲ್ಲಿ ಬರೆದ ವಿಷಯಗಳ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದ್ದು, ಅವುಗಳು ಸತ್ಯವಾಗಿವೆ. ನಾನು ಈ ಪ್ರಕರಣದಲ್ಲಿ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದೇನೆ.

ಅರ್ಜಿದಾರರು ಹಾಜರುಪಡಿಸಿದ ದಾಖಲೆಗಳನ್ನು ಈ ಕೆಳಗಿನಂತೆ ನಿಶಾನೆಯಾಗಿ ಗುರುತಿಸಲಾಯಿತು.

| ಅ. ನಂ. | ದಾಖಲೆಗಳ ವಿವರ | ನಿಶಾನೆ ಸಂಖ್ಯೆ |
|---|---|---|
| 1 | Reference Application | Ex.P1 |
| 2 | ROR of land bearing Sy.No.6 of Yankanch village | Ex.P2 |
| 3 | Receipt for having paid the electricity bill | Ex.P3 |
| 4 | Sugarcane weighment slips | Ex.P4 |
| 5 | Yield certificate of sugarcane | Ex.P5 |
| 6 | Sugarcane price list | Ex.P6 |
| 7 | Yankanchi village map | Ex.P7 |
| 8 | Agreement to sell dated 14.07.2010 of Athani | Ex.P8 |
| 9 | Agreement to sell dated 03.12.2010 of Athani | Ex.P9 |
| 10 | Sale deed dated 08.05.2012 of Kasaba Athani | Ex.P10 |
| 11 | Sale deed dated 19.07.2010 of Chamakeri village | Ex.P11 |
| 12 | Judgment and award in LAC No.576/2018 & other connected matters | Ex.P12 |
| 13 | Judgment and award in LAC No.322/2017 & other connected matters | Ex.P13 |

ಈ ಕಾರಣ ಅರ್ಜಿಯನ್ನು ಪುರಸ್ಕರಿಸಿ ಅರ್ಜಿಯಲ್ಲಿ ಕೋರಿರುವಂತೆ ಹೆಚ್ಚಿನ ಬೆಲೆ ನಿಗದಿ ಮಾಡಬೇಕೆಂದು ಪ್ರಾರ್ಥನೆ.

<u>ಪಾಟೀ **ಸವಾಲುಃ ಮಾನ್ಯ ಡಿ ಜಿ ಪಿಯವರಿಂದ 1ನೇ ಅರ್ಜಿದಾರರ ಪರವಾಗಿಃ -**</u>

ಯಂಕಂಚಿ ಗ್ರಾಮ ಅಥಣಿ ಸುಮಾರು 3-4 ಕಿ.ಮೀ ದೂರದಲ್ಲಿದೆ ಎಂದರೆ ಸರಿ . ಯಂಕಂಚಿ ಗ್ರಾಮಪಂಚಾಯತಿಯ ವ್ಯಾಪ್ತಿಯಲ್ಲಿ ಬರುವ ಹಳ್ಳಿ ಎಂದರೆ ಸರಿ . ನಮ್ಮ ಜಮೀನು ಉತಾರವನ್ನು ನೋಡಿರುತ್ತೇನೆ. ನಾವು ಹಾಜರುಪಡಿಸಿದ ಉತಾರ ನಿಪಿ-2 ಇದು 2005-08ನೇ ಸಾಲಿಗೆ ಸಂಬಂಧಿಸಿದ ಉತಾರ ಇರುತ್ತದೆ ಎಂದರೆ ಸರಿ.

2. ಜಮೀನು ಸ್ವಾಧೀನಪಡಿಸಿಕೊಳ್ಳುವ ಮೊದಲು ಅಧಿಸೂಚನೆಯಾಗಿ ನಮಗೆ ನೋಟಿಸ ಬಂದಿರುತ್ತದೆ ಎಂದರೆ ಸರಿ. ನಂತರ ಭೂಸ್ವಾಧೀನಾಧಿಕಾರಿಗಳು ಮತ್ತು ಸರ್ವೆ ಅಧಿಕಾರಿಗಳು ಎಲ್ಲರೂ ಬಂದು ನಮ್ಮ ಜಮೀನನ್ನು ಪರಿವೀಕ್ಷಣೆ ಮಾಡಿ ಸರ್ವೆ ಮಾಡಿಕೊಂಡು ಹೋಗಿರುತ್ತಾರೆ ಎಂದರೆ ಸರಿ . ನಮ್ಮ ಜಮೀನನ್ನು ಪರಿವೀಕ್ಷಣೆ ಮಾಡಿ ಅದರಲ್ಲಿರುವ ಫಲವತ್ತತೆ ಮತ್ತು ಮಣ್ಣಿನ ಗುಣದ ಮೇಲೆ ಪರಿಹಾರ ಹಣ ನಿಗದಿಪಡಿಸಿರುತ್ತಾರೆ ಎಂದರೆ ಸರಿಯಲ್ಲ.

3. ನನ್ನ ಜಮೀನು ಒಣಬೇಸಾಯದ ಜಮೀನು ಎಂದರೆ ಸರಿಯಲ್ಲ. ನಮ್ಮದು ನೀರಾವರಿ ಜಮೀನು ಇರುತ್ತದೆ. ನಮ್ಮದು ನೀರಾವರಿ ಜಮೀನು ಇತ್ತು ಎಂದು ಉತಾರದಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ನಮ್ಮ ಜಮೀನಿನಲ್ಲಿ ನೀರಾವರಿ ಬೆಳೆ ಬೆಳೆಯುತ್ತಿದದ್ದ ಬಗ್ಗೆ ನಮೂದು ಇಲ್ಲ ಎಂದರೆ ಸರಿಯಲ್ಲ. ನಮ್ಮ ಜಮೀನು ಒಣಬೇಸಾಯ ಜಮೀನಾಗಿದ್ದು ನೀರಾವರಿ ಬೆಳೆಗಳನ್ನು ಬೆಳೆಯುತ್ತಿದ್ದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-3 ವಿದ್ಯುತ ಶಕ್ತಿ ಬಿಲ್ಲಿನಲ್ಲಿ ಜಮೀನು ಸರ್ವೆ ನಂಬರ ಇರುವುದಿಲ್ಲ. ಸದರಿ ರಶೀದಿಯ ಮೇಲೆ ನನ್ನ ಹೆಸರು ಇರುವುದಿಲ್ಲ, ಆದರೆ ನನ್ನ ಅಣ್ಣನ ಹೆಸರು ಇರುತ್ತದೆ. ಸ್ವಾಧೀನಗೊಂಡ ಜಮೀನನ್ನು ಹೊರತುಪಡಿಸಿ ನನಗೆ ಬೇರೆ ಜಮೀನು ಇರುತ್ತದೆ. ನಿಪಿ-3 ರಶೀದಿಯು ಸ್ವಾಧೀನಗೊಂಡ ಜಮೀನಿಗೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ. ನಿಪಿ-4 ಕಬ್ಬಿನ ತೂಕದ ಪಾವತಿಯಲ್ಲಿ ಜಮೀನಿನ ಸರ್ವೆ ನಂಬರ ಇರುವುದಿಲ್ಲ ಹಾಗೂ ನನ್ನ ಹೆಸರು ಇರುವುದಿಲ್ಲ. ಸದರಿ ಪಾವತಿಯಲ್ಲಿ ನನ್ನ ಅಣ್ಣನ ಹೆಸರು ಇರುತ್ತದೆ. ನಿಪಿ-4 ಕಬ್ಬಿನ ತೂಕದ ಪಾವತಿ ಸ್ವಾಧೀನಗೊಂಡ ಜಮೀನಿಗೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ.

4. ನನ್ನದ್ದು ಬ್ಯಾಂಕ ಖಾತೆ ಇದೆ. ಕಬ್ಬಿನ ಬಿಲ್ಲುಗಳು ಬ್ಯಾಂಕ ಖಾತೆಗೆ ಜಮಾ ಆಗುತ್ತವೆ ಎಂದರೆ ಸರಿ . ನಮ್ಮ ಕಬ್ಬಿನ ಬಿಲ್ಲುಗಳು ನನ್ನ ಖಾತೆಗೆ ಜಮಾ ಆಗಿವೆ ಎಂದರೆ ಸರಿ . ಕಬ್ಬಿನ ಬಿಲ್ಲುಗಳು ಜಮಾ ಆದ ಬಗ್ಗೆ ಬ್ಯಾಂಕ ಖಾತೆಯ ದಾಖಲೆಗಳನ್ನು ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ.

5. ಸಾಮಾನ್ಯವಾಗಿ ಹಳ್ಳಿಗಳಲ್ಲಿ ಜಮೀನು ಅಡಾ ಇಟ್ಟುಕೊಂಡು ಸಾಲ ನೀಡುತ್ತಾರೆ ಎಂದರೆ ಸರಿ. ನಿಪಿ-8 ಮತ್ತು 9 ಇವು ಹಣಕಾಸಿಗೆ ಸಂಬಂಧಿಸಿದ ಖರೀದಿ ಕರಾರು ಪತ್ರಗಳು ಎಂದರೆ ಸರಿ. ಅವು ಅಥಣಿ ಗ್ರಾಮದ ಪಟ್ಟಣ ಪಂಚಾಯತಿ ವ್ಯಾಪ್ತಿಗೆ ಬರುತ್ತದೆ ಎಂದರೆ ಸರಿ . ಆದ್ದರಿಂದ ಆ ಜಮೀನುಗಳಿಗೆ ಬೆಲೆ ಜಾಸ್ತಿ ಇದೆ ಎಂದರೆ ಸರಿ .

6. ನಿಪಿ-10 ಮತ್ತು 11ರ ಖರೀದಿ ಪತ್ರಗಳಿಗೆ ಸಂಬಂಧಿಸಿದ ಜಮೀನುಗಳು ನಮ್ಮ ಜಮೀನಿಗಿಂತ ಹೆಚ್ಚು ಫಲವತ್ತತೆಯಿಂದ ಕೂಡಿವೆ ಎಂದರೆ ಸರಿಯಲ್ಲ. ನಿಪಿ-10 ಮತ್ತು 11ರಲ್ಲಿ ನಮೂದಿಸಿದ ಜಮೀನುಗಳು ಹೆಚ್ಚು ಫಲವತ್ತತೆ ಹೊಂದಿರುವುದರಿಂದ ಆ ಜಮೀನಿನ ಬೆಲೆ ನಮ್ಮ ಜಮೀನಿಗೆ ಕೊಡಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ನಿಪಿ-12 ಮತ್ತು 13 ಆದೇಶಗಳಿಗೆ ಸಂಬಂಧಿಸಿದ ಜಮೀನುಗಳು ಮತ್ತು ನಮ್ಮ ಜಮೀನುಗಳು ಒಂದೇ ಗುಣಮಟ್ಟದ ಜಮೀನುಗಳು ಎಂದು ತೋರಿಸಲು ತಜ್ಞರಿಂದ ಮಣ್ಣು ಪರೀಕ್ಷಿಸಿ ಯಾವುದೇ ವರದಿ ಸಲ್ಲಿಸಿರುವುದಿಲ್ಲ.

7. ದಿ: 25-11-2010 ರಂದು ಸರ್ಕಾರದವರು ಅಧಿಸೂಚನೆ ಹೊರಡಿಸಿರುತ್ತಾರೆ ಎಂದರೆ ಸರಿ. ಭೂಸ್ವಾಧೀನಕ್ಕಿಂತ ಮೊದಲು ಭೂಸ್ವಾಧೀನಾಧಿಕಾರಿಗಳು ನಮಗೆ ನೋಟಿಸ ನೀಡಿದ್ದರು ಎಂದರೆ ಸರಿ. ನಂತರ ಭೂಸ್ವಾಧೀನಾಧಿಕಾರಿಗಳು ಮತ್ತು ನಿಗಮದವರು ಜಂಟಿ ಮೋಜಣಿ ಮಾಡಿರುತ್ತಾರೆ ಎಂದರೆ ಸರಿ. ಪರಿಹಾರ ಕೊಡುವ ಮುಂಚೆ ನಮ್ಮ ಜಮೀನಿನ ಸ್ವರೂಪ , ಫಲವತ್ತತೆ, ನೀರಾವರಿ ಬಗ್ಗೆ ಮತ್ತು ಬೆಳೆಯುವ ಬೆಳೆಗಳ ಬಗ್ಗೆ ಪರಿಶೀಲನೆ ಮಾಡಿ ಪರಿಹಾರ ನಿಗದಿಪಡಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಕೋಷ್ಟಕ ನಂ.2ರಲ್ಲಿ ನಮೂದಿಸಿದ ಜಮೀನುಗಳು ನಮ್ಮ ಅಕ್ಕಪಕ್ಕದ ಜಮೀನುಗಳು ಎಂದರೆ ಸರಿ. ಕೋಷ್ಟಕ ನಂ.2ರಲ್ಲಿ ನಮೂದಿಸಿದ ಜಮೀನುಗಳು ಮತ್ತು ನಮ್ಮ ಜಮೀನುಗಳು ಒಂದೇ ತರಹದ ಜಮೀನುಗಳು ಎಂದರೆ ಸರಿ. ಕೋಷ್ಟಕ ನಂ.2ರಲ್ಲಿ ನಮೂದಿಸಿದ ಜಮೀನುಗಳಿಗೆ ಸಂಬಂಧಿಸಿದಂತೆ 2009ರಲ್ಲಿ ಖರೀದಿ ವ್ಯವಹಾರಗಳು ನಡೆದಿವೆ ಎಂದರೆ ಸರಿ. ನಮ್ಮ ಜಮೀನಿನ ಅಕ್ಕಪಕ್ಕದ ಜಮೀನಿನ ಮಾರಾಟದ ಅಂಕಿ ಅಂಶಗಳ ಆಧಾರದ ಮೇಲೆ ಭೂಸ್ವಾಧೀನಾಧಿಕಾರಿಗಳು ಪರಿಹಾರ ನಿಗದಿಪಡಿಸಿದ್ದಾರೆ ಎಂದರೆ ಸರಿ.

ಭೂಸ್ವಾಧೀನಾಧಿಕಾರಿಗಳು ನೀಡಿದ ಪರಿಹಾರ ಸೂಕ್ತ ಮತ್ತು ಯೋಗ್ಯವಾಗಿದೆ ಎಂದರೆ ಸರಿಯಲ್ಲ. ಭೂಸ್ವಾಧೀನ ಅಧಿಕಾರಿಗಳಿಂದ ನಿಗದಿ ಪಡಿಸಿದ ಪರಿಹಾರ ಹಣವನ್ನು ಪಡೆದುಕೊಂಡು ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶದಿಂದ ನಾನು ಸುಳ್ಳು ದಾಖಲೆಗಳನ್ನು ಹಾಜರುಪಡಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ **ಸವಾಲುಃ ಶ್ರೀ ಎಸ್.ಎನ್.ಜಿ ವಕೀಲರಿಂದ 2ನೇ ಎದುರುದಾರರ ಪರಃ**</u>

8. ನನ್ನ ಕೇಸಿನ ನಂಬರ ಯಾವುದು ಎಂದು ನನಗೆ ಹೇಳಲು ಬರುವುದಿಲ್ಲ. ನನ್ನ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳುವ ಬಗ್ಗೆ ದಿಃ 25-11-2010ರಂದು ಪ್ರಾಥಮಿಕ ಅಧಿಸೂಚನೆ ಹೊರಡಿಸಿರುತ್ತಾರೆ. ನಂತರ ನನ್ನ ಜಮೀನುಗಳಲ್ಲಿ ಜಂಟಿ ಮೋಜಣಿ ಮಾಡಿದ್ದಾರೆ ಎಂದರೆ ಸರಿ . ಜಂಟಿ ಮೋಜಣಿ ಮಾಡುವ ಕಾಲಕ್ಕೆ ನೀರಾವರಿ ಮೋಟಾರಾಗಲೀ ನೀರಾವರಿ ಬೆಳೆಯಾಗಲೀ ಕಂಡುಬಂದಿಲ್ಲ ಎಂದರೆ ಸರಿಯಲ್ಲ. ನನ್ನ ಜಮೀನುಗಳಲ್ಲಿ ಕಬ್ಬಿನ ಬೆಳೆ ಇತ್ತು. ಜಂಟಿ ಮೋಜಣಿ ಮಾಡುವ ಸಮಯದಲ್ಲಿ ನನ್ನ ಜಮೀನುಗಳ ನೀರಾವರಿ ಬಗ್ಗೆ ದಾಖಲೆ ಅವರು ಕೇಳಲಿಲ್ಲ ನಾನು ಕೊಡಲಿಲ್ಲ. ಆ ಕಾರಣದಿಂದ ಒಣಬೇಸಾಯ ಜಮೀನು ಎಂದು ನಮೂದಿಸಿದ್ದಾರೆ ಎಂದರೆ ಅವರು ತಪ್ಪಾಗಿ ನಮೂದಿಸಿರುತ್ತಾರೆ ಎಂದು ಸಾಕ್ಷಿ ಸ್ವತಃ ನುಡಿಯುತ್ತಾರೆ.

9. ದಿಃ 11-12-2014ರಂದು ನನ್ನ ಜಮೀನುಗಳಿಗೆ ಸಂಬಂಧಿಸಿದಂತೆ ಅವಾರ್ಡ ಆಗಿರುತ್ತದೆ ಎಂದರೆ ಸರಿ. ನಂತರ ದಿಃ 16-05-2016ರಂದು ಎಸ್ ಎಲ್ ಎ ಓ ರವರಿಗೆ ತಕರಾರು ಅರ್ಜಿ ಸಲ್ಲಿಸಿರುತ್ತೇವೆ ಎಂದರೆ ಸರಿ. ನಮ್ಮ ತಕರಾರು ಅರ್ಜಿಯನ್ನು ನ್ಯಾಯಾಲಯಕ್ಕೆ ಕಳುಹಿಸಲು ನಾನು ಭೂಸ್ವಾಧೀನಾಧಿಕಾರಿಗಳಿಗೆ ಕೇಳಿಕೊಂಡಿದ್ದೇನೆ. ನಮ ತಕರಾರು ಅರ್ಜಿಯನ್ನು ನ್ಯಾಯಾಲಯಕ್ಕೆ ಕಳುಹಿಸಲು 2 ವರ್ಷ ವಿಳಂಬ ಮಾಡಿದ್ದಕ್ಕೆ ನಾನು ನ್ಯಾಯಾಲಯದ ಮುಂದೆ ಅರ್ಜಿಯನ್ನು ಹಾಕಿ ನ್ಯಾಯಾಲಯಕ್ಕೆ ಕಳುಹಿಸುವಂತೆ ಕೇಳಿಕೊಳ್ಳಲು ಯಾವುದೇ ತೊಂದರೆ ಇರಲಿಲ್ಲ.

10. ಕೋಷ್ಟಕ 1ರಲ್ಲಿ ನಮೂದಿಸಿದ ಸರ್ವೆ ನಂಬರುಗಳು ನಮ್ಮೂರಿನಲ್ಲಿ ಅಕ್ಕಪಕ್ಕದಲ್ಲಿರುವ ಸರ್ವೆ ನಂಬರುಗಳು ಎಂದರೆ ಸರಿ . ಆ ನಂಬರುಗಳು ನಮ್ಮ ಜಮೀನಿನ ನಂಬರುಗಳು ಎಲ್ಲಾ ಒಂದೇ ತರಹದ ಜಮೀನುಗಳು ಎಂದರೆ ಸರಿ . ನಮ್ಮೂರಿನಲ್ಲಿ ಜಮೀನುಗಳ ಮಾರಾಟ ಆಗಿವೆ. ಕೋಷ್ಟಕ 1ರಲ್ಲಿ ರುವ ಜಮೀನುಗಳ ಮಾರಾಟದ ಆಧಾರದಲ್ಲಿ ಪರಿಹಾರದ ಹಣವನ್ನು ನಿಗದಿಪಡಿಸಲಾಗಿದೆ ಎಂದರೆ ಸರಿ . ಆ ಎರಡೂ ಜಮೀನುಗಳು ಒಂದೇ ತೆರನಾಗಿದ್ದು ಒಂದೇ ಬೆಲೆ ಅನ್ವಯಿಸುತ್ತವೆ ಎಂದರೆ ಸರಿಯಲ್ಲ. ಕೋಷ್ಟಕ ನಂ.3ರಲ್ಲಿನ ಜಮೀನುಗಳು ನೀರಾವರಿ ಜಮೀನುಗಳು ಎಂದರೆ ಸರಿ . ನೀರಾವರಿ ಜಮೀನುಗಳಿಗೆ ಕೋಷ್ಟಕ ನಂ.3ರಲ್ಲಿಯ ಜಮೀನುಗಳ ಅಧಾರದ ಮೇರೆಗೆ ನೀರಾವರಿ ಜಮೀನುಗಳಿಗೆ ದರ ನಿಗದಿಪಡಿಸಲಾಗಿದೆ ಎಂದರೆ ಸರಿಯಲ್ಲ.

11. ನಿಪಿ-2ರಲ್ಲಿ ನಮ್ಮ ಜಮೀನು ನೀರಾವರಿ ಜಮೀನು ಎಂದು ನಮೂದಿಸಿಲ್ಲ ಎಂದರೆ ಸರಿ . ಗ್ರಾಮಲೆಕ್ಕಾಧಿಕಾರಿಗಳು ನಮೂದು ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-3ರ ವಿದ್ಯುತ ಬಿಲ್ಲಿನಲ್ಲಿ ಹೆಸರು ನಮೂದು ಇರುವುವುದಿಲ್ಲಎಂದರೆ ಸರಿ . ಸಾಕ್ಷಿಯು ಮುಂದವರೆದು ನಮ್ಮ ಅಣ್ಣನ ಹೆಸರು ನಮೂದು ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಬಿಲ್ ನಮ್ಮ ಜಮೀನಿಗೆ ಸಂಬಂಧಿಸಿಲ್ಲ ಎಂದರೆ ಸರಿಯಲ್ಲ. ನನಗೆ ಈ ಜಮೀನನ್ನು ಬಿಟ್ಟು ಬೇರೆ ಜಮೀನುಗಳು ಇರುತ್ತವೆ. ನಿಪಿ-3ರ ಬಿಲ್ ಬೇರೆ ಜಮೀನಿಗೆ ಸಂಬಂಧಿಸಿದ್ದು ಎಂದರೆ ಸರಿಯಲ್ಲ.

12. ನಿಪಿ-7 ಯಂಕಂಚಿ ಗ್ರಾಮದ ನಕಾಶೆಯಲ್ಲಿ ಅಬ್ಬಿಹಾಳ, ಅಥಣಿ ಮತ್ತು ಚಮಕೇರಿ ಊರುಗಳು ಎಷ್ಟು ದೂರ ಇವೆ ಎಂದು ಗುರುತಿಸಲು ಆಗುವುದಿಲ್ಲ ಎಂದರೆ ಸರಿ . ಆದರೆ ಅವು ಅಕ್ಕಪಕ್ಕದ ಹಳ್ಳಿಗಳ. ನಿಪಿ-8 ರಿಂದ 11 ಎಲ್ಲಾ ಖರೀದಿ ಕಾಗದ ಪತ್ರಗಳು ಅಥಣಿಗೆ ಸಂಬಂಧಿಸಿವೆ ಎಂದರೆ ಸರಿ . ಅಥಣಿ ದೊಡ್ಡ ನಗರ ಎಂದರೆ ಸರಿ . ಅಲ್ಲಿ ಸಾಮಾನ್ಯವಾಗಿ ಜಮೀನಿನ ಬೆಲೆ ಹೆಚ್ಚಿ ಗೆ ಇರುತ್ತವೆ ಎಂದರೆ ಸರಿ . ಖರೀದಿ ಕಾಗದ ಪತ್ರಗಳು ನೀರಾವರಿ ಜಮೀನಿಗೆ ಸಂಬಂಧಿಸಿದ್ದು ಎಂದರೆ ಸರಿ .

13. ನಿಪಿ-12 ಮತ್ತು 13ರ ತೀರ್ಪುಗಳಲ್ಲಿರುವ ಜಮೀನುಗಳಿಗೂ ನನ್ನ ಜಮೀನುಗಳಿಗೆ ಗುಣಮಟ್ಟದಲ್ಲಿ ವ್ಯತ್ಯಾಸವಿದ್ದು ಆ ತೀರ್ಪುಗಳು ಬೇರೆ ಊರಿನ ಜಮೀನುಗಳಿಗೆ ಮಾಡಿದ್ದು ಅವು ನನ್ನ ಜಮೀನುಗಳಿಗೆ ಅನ್ವಯವಾಗುವುದಿಲ್ಲ ಎಂದರೆ ಸರಿಯಲ್ಲ. ಭೂಸ್ವಾಧೀನಾಧಿಕಾರಿಗಳು ಯೋಗ್ಯ ಪರಿಹಾರದ ಹಣ ನಿಗದಿಪಡಿಸಿದ್ದರೂ ಹೆಚ್ಚಿನ ಪರಿಹಾರಕ್ಕಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆಂದರೆ ಸರಿಯಲ್ಲ.

<u>ಮರುವಿಚಾರಣೆಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಉಖ್ತಲೇಖದ ಅನ್ವಯ ಬೆರಳಚ್ಚುಗಾರರು ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿ ಪಡೆದುಕೊಳ್ಳಲಾಯಿತು)

ಓ ಹೇ ಕೆ ಸರಿ ಇದೆ.

(ಸುಭಾಷ ಸಂಕದ)

1ನೇ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು,
ಬೆಳಗಾವಿ.